

ಅಮೆರಿಕದ ಮಿಷಿಗನ್ ದಂಪತಿ ಜೇಯ್ ಮತ್ತು ಕತೇರಿ 14ನೇ ಗಂಡು ಮಗುವಿಗೆ ಜನ್ಮವಿತ್ತು ಬೀಗುತ್ತಿದ್ದಾರಂತೆ. ಒಟ್ಟು 14 ಗಂಡು ಮಕ್ಕಳ ಸುಖೀ ಸಂಸಾರ ತಮ್ಮದು ಎಂದು ಹೇಳಿಕೊಂಡ ಈ ದಂಪತಿ ಒಂದೇ ಸಮನೆ ಗಂಡು ಮಕ್ಕಳನ್ನೇ ಪಡೆದಿರುವುದು ಒಂದು ದಾಖಲೆಯಂತೆ. ದಾಖಲೆ ಮಾಡುವ ಹುಚ್ಚು ಹತ್ತಿದರೆ ಹೀಗೆ.. ಫುಲ್‌ಸ್ಟಾಪ್ ಎಂಬುದು ಇರೋದಿಲ್ಲ.



'ಹಾಟ್ ಆ್ಯಂಡ್ ಕೋಲ್ಡ್' ಸಿಂಗರ್ ಕೇಟಿ ಪೆರ್ರಿ ಹೊಸ ಸಾಹಸಕ್ಕೆ ಕೈ ಹಾಕಿದ್ದಾಳೆ. ಈಕೆ ಮಾರುಕಟ್ಟೆಗೆ ಬಿಟ್ಟಿರುವ ಹೊಸ ಮಾದರಿಯ ಶೂ–ಚಪ್ಪಲಿಗಳು ಹಣ್ಣಿನ ಪರಿಮಳ ಬೀರುತ್ತವೆಯಂತೆ. ಚೆರ್ರಿ, ಕಲ್ಲಂಗಡಿ, ಲಿಂಬು.. ಹೀಗೆ... ಧರಿಸಿದವರು ಸಮೀಪ ಬಂದರೆ ಚಪ್ಪಲಿಯನ್ನೇ ಅಗಿದು ತಿಂದು ಬಿಡುವಷ್ಟು ಆಕರ್ಷಣೆಯಂತೆ. 'ಪಾದಗಳಂತೆ ಕೆಟ್ಟ ವಾಸನೆ..' ಎಂಬ ಗಾದೆಮಾತನ್ನೇ ಆಕೆ ತಿರುಚಿದ್ದಾಳೆ.

ನಾರ್ವೆಯಲ್ಲಿ ಈ ದಿನಗಳಲ್ಲಿ ಅಪಘಾತವಾಗಿ ಸಾಯುವ ವಿದ್ಯಾರ್ಥಿಗಳ ಸಂಖ್ಯೆ ಅಧಿಕವಂತೆ. ಸ್ನಾತಕೋತ್ತರ ಪದವಿ ಪ್ರದಾನ 'ರಸ್' ಎಂಬ ಸಂಭ್ರಮಾಚರಣೆ ಇದಕ್ಕೆ ಕಾರಣವಂತೆ. ಆಚರಣೆಯೆಂದರೆ ಕುಡಿತ, ಕುಣಿತ ಇರಬಹುದೆಂದು ಮಾಮೂಲಾಗಿ ಅಂದುಕೊಂಡರೆ ಇದಕ್ಕೆ ಇನ್ನೊಂದು ಸೇರಿಕೊಂಡು ಅಧ್ವಾನ ಮಾಡುತ್ತಿದೆಯಂತೆ. ವಿದ್ಯಾರ್ಥಿಗಳು ರಸ್ತೆಗಳಲ್ಲಿ ನಗ್ನರಾಗಿ ಓಡುತ್ತಾರಂತೆ. ವಾಹನ ಚಾಲಕರು ಅಚ್ಚರಿ, ಕುತೂಹಲದಿಂದ ತಾವು ವಾಹನ ಚಾಲನೆ ಮಾಡುತ್ತಿರುವುದನ್ನೇ ಮರೆತು ವಿದ್ಯಾರ್ಥಿಗಳಿಗೆ ಗುದ್ದಿಸುತ್ತಾರಂತೆ.

# ಆಹಾ ಸುದ್ದಿ!

★ ಸಸಿತೋಟ

ಚೀನಾದಲ್ಲಿ ವ್ಯಕ್ತಿಯೊಬ್ಬ 20 ವರ್ಷಗಳ ಹಿಂದೆ ನುಂಗಿದ್ದ ಲೈಟರ್ ಅನ್ನು ಇತ್ತೀಚೆಗೆ ಶಸ್ತ್ರಚಿಕಿತ್ಸೆ ಮಾಡಿ ಹೊರತೆಗೆದಿದ್ದಾರಂತೆ. ಆತ ಯಾಕೆ ನುಂಗಿದ್ದನೋ ಗೊತ್ತಿಲ್ಲ, ಹೊಟ್ಟೆಯೊಳಗೇ ಒಂದಿಷ್ಟು ಗ್ಯಾಸ್ ಉತ್ಪಾದನೆಯಾಗಿದ್ದರೆ, ಅಡುಗೆಯನ್ನೂ ಅಲ್ಲೇ ಬೇಯಿಸಬಹುದಿತ್ತು.



ಚೀನಾದ ಝೂ ಯೇ ಎಂಬಾತ ಪೂರ್ಣ ಪ್ರಮಾಣದ ಏರ್‌ಬಸ್ ಎ320 ಮಾದರಿಯನ್ನು ನಿರ್ಮಿಸಿದ್ದಾನಂತೆ. ಇದಕ್ಕೆ ತಗಲಿದ ವೆಚ್ಚ ಬರೋಬ್ಬರಿ 158,810 ಡಾಲರ್ (ಅಂದಾಜು 1,05,14016 ರೂಪಾಯಿ). ಏನು ಮಾಡಿದರೂ ಈ ವಿಮಾನಕ್ಕೆ ಹಾರಾಟ ನಡೆಸುವ ಯೋಗ್ಯತೆ ಇಲ್ಲ. ಹೀಗಾಗಿ ನೆಲದಲ್ಲೇ ಕುಳಿತು ಉಪಾಹಾರ ಗೃಹವೆಂಬ ಪಟ್ಟ ಹೊತ್ತುಕೊಳ್ಳಲಿದೆಯಂತೆ.



ಡಚ್ ಹಳ್ಳಿ ಜೆಲ್ವಮ್ ಸಮೀಪದ ಹೆದ್ದಾರಿಯಲ್ಲಿ ಹಾಡುವ ಸಂಗೀತದ ಪಟ್ಟಿಗಳನ್ನು ಅಳವಡಿಸಲಾಗಿತ್ತು. ನಿಗದಿತ ವೇಗದಲ್ಲಿ ಚಲಿಸುವ ವಾಹನಗಳು ರಸ್ತೆ ಬದಿಯಲ್ಲಿ ಸಾಗಿದರೆ ಅಲ್ಲಿಯ ರಾಷ್ಟ್ರಗೀತೆ ಹೊರಹೊಮ್ಮುತ್ತಿತ್ತು. ಆದರೆ ರಾತ್ರಿಯಿಡೀ ಸಮೀಪದ ಗ್ರಾಮಸ್ಥರಿಗೆ ಇದನ್ನು ಕೇಳಿ ಕೇಳಿ ನಿದ್ರಾಹೀನತೆ ಶುರುವಾಗಿದೆಯಂತೆ. ಈಗ ಅಧಿಕಾರಿಗಳು ಈ ಪಟ್ಟಿಗಳನ್ನು ತೆಗೆದು ಹಾಕಲು ನಿರ್ಧರಿಸಿದ್ದಾರಂತೆ. ಹಾಡು ಕೇಳಿಸಿದಾಗ ನಿಲ್ಲುವ ನಿಯಮವೇನಾದರೂ ಇದ್ದಿದ್ದರೆ ನಿಂತೇ ನಿದ್ರೆ ಹೋಗುವ ಹೊಸ ವಿಧಾನ ಕಲಿಯಬೇಕಾಗುತ್ತಿತ್ತೇನೋ!